# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1242
**ಸದಸ್ಯರ ಹೆಸರು** : ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ)
**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
**ಉತ್ತರಿಸಬೇಕಾದ ದಿನಾಂಕ** : 13.03.2026.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ಸ್ತ್ರೀ ಶಕ್ತಿ ಸಂಘಗಳು/ಸ್ವಸಹಾಯ ಸಂಘಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ಒದಗಿಸುವುದು): | • ಸ್ವ-ಸಹಾಯ ಗುಂಪುಗಳ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣದ ಧ್ಯೇಯದೊಂದಿಗೆ 2000-01ನೇ ಸಾಲಿನಲ್ಲಿ ಸ್ತ್ರೀಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಯಿತು.<br>• ಸ್ತ್ರೀಶಕ್ತಿ ಯೋಜನೆಯಡಿ ಸಮಾಜದ ಬಡ ಕುಟುಂಬದ, ಸಾಮಾಜಿಕ ಅಥವಾ ಆರ್ಥಿಕ ಹಿನ್ನೆಲೆಯುಳ್ಳ ಸಮಾನ ಮನಸ್ಸಿನ ಪರಸ್ಪರ ವಿಶ್ವಾಸದಿಂದ ಕೂಡಿರುವ ಭೂರಹಿತ ಮಹಿಳಾ ಕೃಷಿ ಕಾರ್ಮಿಕರು, ಪರಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದ ಕುಟುಂಬದ 15-20 ಮಹಿಳೆಯರನ್ನು ಒಟ್ಟು ಸೇರಿಸಿ 1,65,960 ಲಕ್ಷ ಗುಂಪುಗಳನ್ನು ಹಂತಹಂತವಾಗಿ ರಚಿಸಲಾಗಿತ್ತು.<br>• ಸ್ತ್ರೀಶಕ್ತಿ ಯೋಜನೆಯಡಿ ರಚನೆಗೊಂಡ ಸ್ತ್ರೀಶಕ್ತಿ ಗುಂಪುಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಆ) | ಈ ರೀತಿಯಾಗಿ ನೋಂದಾಯಿಸಿಕೊಂಡಿರುವ ಸಂಘಗಳಿಗೆ ಸರ್ಕಾರವು ರೂಪಿಸಿರುವ ಯೋಜನೆಗಳು ಯಾವುವು; ಈ ಯೋಜನೆಗಳಿಂದ ಇದುವರೆಗೂ ಎಷ್ಟು ಫಲಾನುಭವಿಗಳು ಪ್ರಯೋಜನ ಪಡೆದಿರುತ್ತಾರೆ; (ಶಕ್ತಿ ಯೋಜನೆ ಹೊರತು ಪಡಿಸಿ) | ಸ್ತ್ರೀಶಕ್ತಿ ಯೋಜನೆಯು ಪ್ರಾರಂಭವಾಗಿ 25 ವರ್ಷಗಳು ಕಳೆದಿದ್ದು ಹಂತ ಹಂತವಾಗಿ ರಚಿಸಲಾದ 1,65,960 ಸ್ತ್ರೀಶಕ್ತಿ ಗುಂಪುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿತ್ತು.<br><br>• ಸುತ್ತುನಿಧಿ/ಹೆಚ್ಚುವರಿ ಸುತ್ತುನಿಧಿ<br>• ಅಧಿಕ ಉಳಿತಾಯ ಮಾಡಿರುವ ಗುಂಪುಗಳಿಗೆ ಪ್ರೋತ್ಸಾಹಧನ<br>• ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿರುವ ಗುಂಪುಗಳಿಗೆ ಪ್ರೋತ್ಸಾಹಧನ |
| ಇ) | ಮಹಿಳೆಯರಿಗೆ ಮತ್ತು ಮಕ್ಕಳ ಅಭಿವೃದ್ಧಿಗೆ ಸರ್ಕಾರವು ರೂಪಿಸಿರುವ ಹೊಸ ಯೋಜನೆಗಳು ಯಾವುವು; ಇವುಗಳಿಂದ ಉಂಟಾಗುವ ಪ್ರಯೋಜನಗಳೇನು; | ಮಹಿಳೆಯರಿಗೆ ಮತ್ತು ಮಕ್ಕಳ ಅಭಿವೃದ್ಧಿಗೆ ಸರ್ಕಾರವು ರೂಪಿಸಿರುವ ಹೊಸ ಯೋಜನೆಗಳ ವಿವರಗಳನ್ನು **ಅನುಬಂಧ-2** ಒದಗಿಸಿದೆ. |
| ಈ) | ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಮತ್ತು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಇವುಗಳನ್ನು ತಡೆಯಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? | ಬಂದಿದೆ.<br><br>ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಮೇಲೆ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಯಲು ಸರ್ಕಾರವು ಕೈಗೊಂಡಿರುವ ಯೋಜನೆಗಳು ಮತ್ತು ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಕಾಯ್ದೆ / ಕಾನೂನುಗಳ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. |

**ಸಂಖ್ಯೆ: ಮಮಇ 55 ಮಮಅ 2026**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

## ಅನುಬಂಧ-1

### ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1242 (1121)

| ಕ್ರ.ಸಂ | ಜಿಲ್ಲೆಗಳು | ತಾಲ್ಲೂಕು | ಇಲಾಖೆಯಡಿ ರಚನೆಗೊಂಡ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ | ಸಕ್ರಿಯವಾಗಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ | ನಿಷ್ಕ್ರಿಯವಾಗಿರುವ ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ |
|---|---|---|---|---|---|
| 1 | ಬಾಗಲಕೋಟೆ | ಬಾಗಲಕೋಟೆ | 618 | 551 | 67 |
| 2 | | ಬೀಳಗಿ | 505 | 452 | 53 |
| 3 | | ಹುನಗುಂದ | 703 | 549 | 154 |
| 4 | | ಬಾದಾಮಿ | 950 | 850 | 100 |
| 5 | | ಜಮಖಂಡಿ | 1286 | 1226 | 60 |
| 6 | | ಮುಧೋಳ | 817 | 732 | 85 |
| | ಒಟ್ಟು | | **4879** | **4360** | **519** |
| 7 | ಬಳ್ಳಾರಿ | ಬಳ್ಳಾರಿ (ನಗರ) | 579 | 0 | 579 |
| 8 | | ಸಿರುಗುಪ್ಪ | 999 | 524 | 475 |
| 9 | | ಬಳ್ಳಾರಿ (ಗ್ರಾ) | 1044 | 802 | 242 |
| 10 | | ಸಂಡೂರು | 859 | 729 | 130 |
| | ಒಟ್ಟು | | **3481** | **2055** | **1426** |
| 11 | ಬೆಳಗಾವಿ | ರಾಯಬಾಗ | 1366 | 1366 | 0 |
| 12 | | ಅಥಣಿ | 904 | 610 | 294 |
| 13 | | ಕಾಗವಾಡ | 777 | 777 | 0 |
| 14 | | ಸವದತ್ತಿ | 1245 | 1047 | 198 |
| 15 | | ಬೆಳಗಾವಿ(ನ) | 480 | 294 | 186 |
| 16 | | ಹುಕ್ಕೇರಿ | 1525 | 1226 | 299 |
| 17 | | ಗೋಕಾಕ | 676 | 525 | 151 |
| 18 | | ಅರಭಾವಿ | 1310 | 1301 | 9 |
| 19 | | ಚಿಕ್ಕೋಡಿ | 863 | 766 | 97 |
| 20 | | ನಿಪ್ಪಾಣಿ | 1884 | 1667 | 217 |
| 21 | | ಬೆಳಗಾವಿ (ಗ್ರಾ) | 1565 | 1467 | 98 |
| 22 | | ಖಾನಾಪೂರ | 1034 | 894 | 140 |
| 23 | | ರಾಮದುರ್ಗ | 962 | 920 | 42 |
| 24 | | ಬೈಲಹೊಂಗಲ | 1430 | 1296 | 134 |
| | ಒಟ್ಟು | | **16021** | **14156** | **1865** |
| 25 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | 958 | 789 | 169 |
| 26 | | ದೊಡ್ಡಬಳ್ಳಾಪ್ರರ | 946 | 830 | 116 |
| 27 | | ಹೊಸಕೋಟೆ | 1090 | 940 | 150 |
| 28 | | ನೆಲಮಂಗಲ | 878 | 642 | 236 |
| | ಒಟ್ಟು | | **3872** | **3201** | **671** |
| 29 | ಬೆಂಗಳೂರು ನಗರ | ಬೆಂಗಳೂರು ಕೇಂದ್ರ | 390 | 77 | 313 |
| 30 | | ಬೆಂಗಳೂರು ರಾಜ್ಯ | 267 | 47 | 220 |
| 31 | | ಆನೇಕಲ್ | 1395 | 1295 | 195 |
| 32 | | ಬೆಂಗಳೂರು ಉತ್ತರ | 1729 | 1371 | 231 |
| 33 | | ಬೆಂಗಳೂರು ದಕ್ಷಿಣ | 1633 | 1274 | 359 |
| 34 | | ಬೆಂಗಳೂರು ಪೂರ್ವ | 170 | 85 | 117 |
| | ಒಟ್ಟು | | **5584** | **4149** | **1435** |
| 35 | ಬೀದರ | ಬೀದರ | 876 | 561 | 315 |
| 36 | | ಭಾಲ್ಕಿ | 689 | 539 | 150 |
| 37 | | ಬಸವಕಲ್ಯಾಣ | 688 | 601 | 87 |
| 38 | | ಹುಮನಾಬಾದ | 1015 | 598 | 417 |
| 39 | | ಸಂತಪೂರ | 783 | 508 | 275 |
| | ಒಟ್ಟು | | **4051** | **2807** | **1244** |
| 40 | ಚಾಮರಾಜನಗರ | ಚಾಮರಾಜನಗರ | 959 | 694 | 265 |
| 41 | | ಸಂತೇಮರಹಳ್ಳಿ | 987 | 574 | 413 |
| 42 | | ಕೊಳ್ಳೇಗಾಲ | 1112 | 817 | 295 |
| 43 | | ಗುಂಡ್ಲುಪೇಟೆ | 983 | 650 | 333 |
| 44 | | ಯಳಂದೂರು | 439 | 396 | 43 |
| | ಒಟ್ಟು | | **4480** | **3131** | **1349** |

| | | | | | |
|---|---|---|---|---|---|
| 45 | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | 808 | 456 | 352 |
| 46 | | ಚಿಕ್ಕಬಳ್ಳಾಪುರ | 705 | 676 | 29 |
| 47 | | ಚಿಂತಾಮಣಿ | 1492 | 1382 | 110 |
| 48 | | ಗೌರಿಬಿದನೂರು | 1257 | 847 | 410 |
| 49 | | ಗುಡಿಬಂಡೆ | 386 | 352 | 34 |
| 50 | | ಶಿಡ್ಲಘಟ್ಟ | 1088 | 815 | 273 |
| **ಒಟ್ಟು** | | | **5736** | **4528** | **1208** |
| 51 | ಚಿಕ್ಕಮಗಳೂರು | ಕಡೂರು | 805 | 600 | 205 |
| 52 | | ಕೊಪ್ಪ | 361 | 306 | 55 |
| 53 | | ಮೂಡಿಗೆರೆ | 417 | 404 | 13 |
| 54 | | ಶೃಂಗೇರಿ | 237 | 227 | 10 |
| 55 | | ಚಿಕ್ಕಮಗಳೂರು | 910 | 804 | 106 |
| 56 | | ತರೀಕೆರೆ | 792 | 617 | 175 |
| 57 | | ನ.ರಾ.ಪುರ | 284 | 261 | 23 |
| **ಒಟ್ಟು** | | | **3806** | **3219** | **587** |
| 58 | ಚಿತ್ರದುರ್ಗ | ಭರಮಸಾಗರ | 853 | 823 | 30 |
| 59 | | ಚಿತ್ರದುರ್ಗ | 549 | 490 | 59 |
| 60 | | ಚಳ್ಳಕೆರೆ | 813 | 755 | 58 |
| 61 | | ಹಿರಿಯೂರು | 1101 | 760 | 341 |
| 62 | | ಹೊಳಲ್ಕೆರೆ | 984 | 818 | 166 |
| 63 | | ಹೊಸದುರ್ಗ | 1187 | 1157 | 30 |
| 64 | | ಮೊಳಕಾಲ್ಮೂರು | 661 | 499 | 162 |
| **ಒಟ್ಟು** | | | **6148** | **5302** | **846** |
| 65 | ದಕ್ಷಿಣ ಕನ್ನಡ | ಬೆಳ್ತಂಗಡಿ | 548 | 548 | 0 |
| 66 | | ಸುಳ್ಯ | 319 | 319 | 0 |
| 67 | | ಮಂಗಳೂರು(ನ) | 258 | 158 | 100 |
| 68 | | ಮಂಗಳೂರು(ಗ್ರಾ) | 898 | 875 | 23 |
| 69 | | ಬಂಟ್ವಾಳ | 756 | 756 | 0 |
| 70 | | ವಿಟ್ಲ | 547 | 547 | 0 |
| 71 | | ಪುತ್ತೂರು | 832 | 822 | 10 |
| **ಒಟ್ಟು** | | | **4158** | **4025** | **133** |
| 72 | ದಾವಣಗೆರೆ | ದಾವಣಗೆರೆ | 1274 | 1010 | 264 |
| 73 | | ಜಗಳೂರು | 1032 | 1011 | 21 |
| 74 | | ಹರಿಹರ | 862 | 749 | 113 |
| 75 | | ಹೊನ್ನಾಳಿ | 919 | 659 | 260 |
| 76 | | ಚನ್ನಗಿರಿ | 958 | 800 | 158 |
| **ಒಟ್ಟು** | | | **5045** | **4229** | **816** |
| 77 | ಧಾರವಾಡ | ಧಾರವಾಡ (ಗ್ರಾ) | 881 | 852 | 29 |
| 78 | | ಹುಬ್ಬಳ್ಳಿ (ಗ್ರಾ) | 511 | 433 | 78 |
| 79 | | ಹುಬ್ಬಳ್ಳಿ-ಧಾರವಾಡ(ಶ) | 306 | 279 | 27 |
| 80 | | ಕಲಘಟಗಿ | 579 | 579 | 0 |
| 81 | | ಕುಂದಗೋಳ | 760 | 712 | 48 |
| 82 | | ನವಲಗುಂದ | 558 | 531 | 27 |
| **ಒಟ್ಟು** | | | **3595** | **3386** | **209** |
| 83 | ಗದಗ | ಶಿರಹಟ್ಟಿ | 832 | 747 | 85 |
| 84 | | ಮುಂಡರಗಿ | 796 | 701 | 95 |
| 85 | | ಗದಗ | 824 | 717 | 107 |
| 86 | | ರೋಣ | 1042 | 993 | 49 |
| 87 | | ನರಗುಂದ | 477 | 449 | 28 |
| **ಒಟ್ಟು** | | | **3971** | **3607** | **364** |
| 88 | ಹಾಸನ | ಹಾಸನ | 863 | 798 | 65 |
| 89 | | ಚನ್ನರಾಯಪಟ್ಟಣ | 1124 | 1036 | 88 |
| 90 | | ಹೊಳೆನರಸೀಪುರ | 802 | 627 | 175 |
| 91 | | ಬೇಲೂರು | 812 | 721 | 91 |
| 92 | | ಸಕಲೇಶಪುರ | 727 | 527 | 200 |
| 93 | | ಆಲೂರು | 611 | 361 | 250 |
| 94 | | ಅರಸೀಕೆರೆ | 1479 | 1411 | 68 |
| 95 | | ಅರಕಲಗೂಡು | 819 | 819 | 0 |
| **ಒಟ್ಟು** | | | **7237** | **6300** | **937** |

| | | | | | |
|---|---|---|---|---|---|
| 96 | ಹಾವೇರಿ | ಹಾನಗಲ್ | 867 | 788 | 79 |
| 97 | | ರಾಣೆಬೆನ್ನೂರ | 991 | 862 | 129 |
| 98 | | ಹಿರೇಕೆರೂರ | 901 | 759 | 142 |
| 99 | | ಸವಣೂರು | 478 | 390 | 88 |
| 100 | | ಶಿಗ್ಗಾಂವ | 637 | 384 | 253 |
| 101 | | ಬ್ಯಾಡಗಿ | 495 | 429 | 66 |
| 102 | | ಹಾವೇರಿ | 932 | 761 | 171 |
| | | **ಒಟ್ಟು** | **5301** | **4373** | **928** |
| 103 | ಕಲ್ಬುರ್ಗಿ | ಅಫಜಲಪೂರ | 999 | 905 | 94 |
| 104 | | ಆಳಂದ | 1083 | 993 | 90 |
| 105 | | ಚಿಂಚೋಳಿ | 954 | 894 | 60 |
| 106 | | ಚಿತ್ತಾಪೂರ | 557 | 482 | 75 |
| 107 | | ಕಲಬುರಗಿ(ಗ್ರಾ) | 1035 | 955 | 80 |
| 108 | | ಕಲಬುರಗಿ(ನ) | 443 | 393 | 50 |
| 109 | | ಜೇವರ್ಗಿ | 1081 | 1011 | 70 |
| 110 | | ಸೇಡಂ | 873 | 841 | 32 |
| 111 | | ಶಹಾಬಾದ | 822 | 570 | 252 |
| | | **ಒಟ್ಟು** | **7847** | **7044** | **803** |
| 112 | ಕೊಡಗು | ಮಡಿಕೇರಿ | 372 | 150 | 222 |
| 113 | | ಸೋಮವಾರಪೇಟೆ | 517 | 271 | 246 |
| 114 | | ವಿರಾಜಪೇಟೆ | 439 | 333 | 106 |
| | | **ಒಟ್ಟು** | **1328** | **754** | **574** |
| 115 | ಕೋಲಾರ | ಬಂಗಾರಪೇಟೆ | 803 | 790 | 13 |
| 116 | | ಬೇತಮಂಗಲ | 554 | 524 | 30 |
| 117 | | ಕೋಲಾರ | 1191 | 916 | 275 |
| 118 | | ಮಾಲೂರು | 927 | 700 | 227 |
| 119 | | ಮುಳಬಾಗಿಲು | 648 | 648 | 0 |
| 120 | | ಶ್ರೀನಿವಾಸಪುರ | 886 | 720 | 166 |
| | | **ಒಟ್ಟು** | **5009** | **4298** | **711** |
| 121 | ಕೊಪ್ಪಳ | ಕೊಪ್ಪಳ | 870 | 746 | 124 |
| 122 | | ಗಂಗಾವತಿ | 664 | 281 | 601 |
| 123 | | ಕನಕಗಿರಿ | 622 | 230 | 300 |
| 124 | | ಕುಷ್ಟಗಿ | 633 | 320 | 451 |
| 125 | | ಯಲುಬುರ್ಗಾ | 817 | 333 | 220 |
| | | **ಒಟ್ಟು** | **3606** | **1910** | **1696** |
| 126 | ಮಂಡ್ಯ | ಮಂಡ್ಯ | 629 | 548 | 81 |
| 127 | | ಮಳವಳ್ಳಿ | 1050 | 865 | 185 |
| 128 | | ಪಾಂಡವಪುರ | 845 | 718 | 127 |
| 129 | | ಮದ್ದೂರು | 1255 | 1098 | 157 |
| 130 | | ನಾಗಮಂಗಲ | 833 | 680 | 153 |
| 131 | | ದುದ್ದ | 798 | 747 | 51 |
| 132 | | ಶ್ರೀರಂಗಪಟ್ಟಣ | 837 | 796 | 41 |
| 133 | | ಕೃ.ರಾ.ಪೇಟೆ | 1015 | 745 | 270 |
| | | **ಒಟ್ಟು** | **7262** | **6197** | **1065** |
| 134 | ಮೈಸೂರು | ಟಿ.ನರಸೀಪುರ | 988 | 497 | 491 |
| 135 | | ಹುಣಸೂರು | 895 | 520 | 375 |
| 136 | | ಹೆಚ್.ಡಿ ಕೋಟೆ | 688 | 305 | 383 |
| 137 | | ಮೈಸೂರು (ನ) | 692 | 60 | 632 |
| 138 | | ನಂಜನಗೂಡು | 664 | 350 | 314 |
| 139 | | ಬಿಳಿಗೆರ | 980 | 634 | 356 |
| 140 | | ಪಿರಿಯಾಪಟ್ಟಣ | 902 | 380 | 522 |
| 141 | | ಕೆ.ಆರ್ ನಗರ | 1056 | 658 | 388 |
| 142 | | ಮೈಸೂರು (ಗ್ರಾ) | 988 | 620 | 368 |
| | | **ಒಟ್ಟು** | **7853** | **4024** | **3829** |
| 143 | ರಾಯಚೂರು | ರಾಯಚೂರು | 635 | 335 | 315 |
| 144 | | ಗಿಲ್ಲೇಸುಗೂರು | 1034 | 1002 | 32 |
| 145 | | ಮಾನವಿ | 670 | 142 | 528 |
| 146 | | ಸಿರವಾರ | 525 | 229 | 296 |
| 147 | | ಸಿಂಧನೂರು | 820 | 737 | 139 |
| 148 | | ತುರ್ವಿಹಾಳ್ | 586 | 329 | 186 |
| 149 | | ಲಿಂಗಸುಗೂರು | 1097 | 674 | 423 |
| 150 | | ದೇವದುರ್ಗ | 843 | 843 | 0 |
| | | **ಒಟ್ಟು** | **6210** | **4291** | **1919** |

| | | | | | |
|---|---|---|---|---|---|
| 151 | ಬೆಂಗಳೂರು ದಕ್ಷಿಣ | ರಾಮನಗರ | 1184 | 1071 | 113 |
| 152 | | ಚನ್ನಪಟ್ಟಣ | 1512 | 1414 | 98 |
| 153 | | ಮಾಗಡಿ | 979 | 900 | 79 |
| 154 | | ಕನಕಪುರ | 1025 | 612 | 413 |
| 155 | | ಹಾರೋಹಳ್ಳಿ | 386 | 326 | 60 |
| ಒಟ್ಟು | | | **5086** | **4323** | **763** |
| 156 | ಶಿವಮೊಗ್ಗ | ಸೊರಬ | 817 | 804 | 13 |
| 157 | | ಸಾಗರ | 666 | 651 | 15 |
| 158 | | ಭದ್ರಾವತಿ | 744 | 722 | 22 |
| 159 | | ಶಿವಮೊಗ್ಗ | 825 | 788 | 37 |
| 160 | | ಶಿಕಾರಿಪುರ | 1002 | 996 | 6 |
| 161 | | ಹೊಸನಗರ | 370 | 365 | 5 |
| 162 | | ತೀರ್ಥಹಳ್ಳಿ | 576 | 559 | 17 |
| ಒಟ್ಟು | | | **5000** | **4885** | **115** |
| 163 | ತುಮಕೂರು | ಚಿಕ್ಕನಾಯಕನಹಳ್ಳಿ | 1165 | 1123 | 42 |
| 164 | | ಗುಬ್ಬಿ | 1290 | 1198 | 92 |
| 165 | | ಕೊರಟಗೆರೆ | 678 | 504 | 174 |
| 166 | | ಕುಣಿಗಲ್ | 905 | 757 | 148 |
| 167 | | ಮಧುಗಿರಿ | 1165 | 756 | 409 |
| 168 | | ಪಾವಗಡ | 1000 | 917 | 83 |
| 169 | | ಶಿರಾ | 1087 | 950 | 137 |
| 170 | | ತಿಪಟೂರು | 1080 | 828 | 252 |
| 171 | | ತುಮಕೂರು (ಗ್ರಾ) | 1757 | 1385 | 372 |
| 172 | | ತುಮಕೂರು (ನ) | 280 | 238 | 42 |
| 173 | | ತುರುವೇಕೆರೆ | 928 | 778 | 150 |
| ಒಟ್ಟು | | | **11335** | **9434** | **1901** |
| 174 | ಉಡುಪಿ | ಉಡುಪಿ | 653 | 636 | 17 |
| 175 | | ಬ್ರಹ್ಮಾವರ | 655 | 655 | 0 |
| 176 | | ಕುಂದಾಪುರ | 1122 | 1122 | 0 |
| 177 | | ಕಾರ್ಕಳ | 657 | 657 | 0 |
| ಒಟ್ಟು | | | **3087** | **3070** | **17** |
| 178 | ಉತ್ತರ ಕನ್ನಡ | ಕಾರವಾರ | 254 | 212 | 42 |
| 179 | | ಅಂಕೋಲಾ | 206 | 191 | 15 |
| 180 | | ಕುಮಟಾ | 326 | 314 | 12 |
| 181 | | ಹೊನ್ನಾವರ | 261 | 256 | 5 |
| 182 | | ಭಟ್ಕಳ | 304 | 295 | 9 |
| 183 | | ಶಿರಸಿ | 275 | 254 | 21 |
| 184 | | ಸಿದ್ದಾಪುರ | 280 | 274 | 6 |
| 185 | | ಯಲ್ಲಾಪುರ | 140 | 130 | 10 |
| 186 | | ಹಳಿಯಾಳ | 307 | 291 | 16 |
| 187 | | ಮುಂಡಗೋಡ | 167 | 99 | 68 |
| 188 | | ಜೋಯಿಡಾ | 168 | 156 | 12 |
| ಒಟ್ಟು | | | **2688** | **2472** | **216** |
| 189 | ವಿಜಯನಗರ | ಹೊಸಪೇಟೆ | 736 | 669 | 67 |
| 190 | | ಕೂಡ್ಲಿಗಿ | 1168 | 1168 | 0 |
| 191 | | ಹೂವಿನ ಹಡಗಲಿ | 745 | 745 | 0 |
| 192 | | ಹಗರಿಬೊಮ್ಮನಹಳ್ಳಿ | 726 | 679 | 47 |
| 193 | | ಹರಪನಹಳ್ಳಿ | 777 | 693 | 84 |
| ಒಟ್ಟು | | | **4152** | **3954** | **198** |
| 194 | ವಿಜಯಪುರ | ಇಂಡಿ | 687 | 687 | 0 |
| 195 | | ಚಡಚಣ | 424 | 424 | 0 |
| 196 | | ಸಿಂದಗಿ | 806 | 709 | 97 |
| 197 | | ವಿಜಯಪುರ(ಗ್ರಾ) | 736 | 736 | 0 |
| 198 | | ವಿಜಯಪುರ(ನ) | 276 | 276 | 0 |
| 199 | | ಬ.ಬಾಗೇವಾಡಿ | 886 | 886 | 0 |
| 200 | | ಮುದ್ದೇಬಿಹಾಳ | 878 | 878 | 0 |
| ಒಟ್ಟು | | | **4693** | **4596** | **97** |
| 201 | ಯಾದಗಿರಿ | ಶಹಾಪುರ | 966 | 780 | 186 |
| 202 | | ಸುರಪುರ | 1314 | 1149 | 165 |
| 203 | | ಯಾದಗಿರಿ | 494 | 292 | 202 |
| 204 | | ಗುರುಮಠಕಲ್ | 665 | 496 | 169 |
| ಒಟ್ಟು | | | **3439** | **2717** | **722** |
| **Grand Total** | | | **165960** | **136797** | **29163** |

## ಅನುಬಂಧ-2

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1121 (1242)

ಮಹಿಳೆಯರಿಗೆ ಮತ್ತು ಮಕ್ಕಳ ಅಭಿವೃದ್ಧಿಗೆ ಸರ್ಕಾರವು ರೂಪಿಸಿರುವ ಹೊಸ ಯೋಜನೆಗಳ ವಿವರ:

1 **'ಅಕ್ಕ ಪಡೆ'** :ರಾಜ್ಯದ ಮಹಿಳೆಯರು ಮತ್ತು ಮಕ್ಕಳಲ್ಲಿ ಕಾನೂನು ಅರಿವು, ಜಾಗೃತಿ ಶಿಕ್ಷಣ ನೀಡುವುದರ ಜೊತೆಗೆ ಸಂಕಷ್ಟದಲ್ಲಿರುವ ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ/ನೆರವು ನೀಡುವ ಉದ್ದೇಶದಿಂದ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಗೃಹ ಇಲಾಖೆಯ ಸಹಭಾಗಿತ್ವದೊಂದಿಗೆ "ಅಕ್ಕ ಪಡೆ" ಯೋಜನೆಯು ಜಾರಿಯಾಗಿರುತ್ತದೆ.'ಅಕ್ಕ ಪಡೆ' ಯೋಜನೆಯನ್ನು ರಾಜ್ಯದ 31 ಜಿಲ್ಲೆಗಳಲ್ಲಿ ಹಾಗೂ 5 ಆಯುಕ್ತಾಲಯಗಳಲ್ಲಿ ಅನುಷ್ಠಾನಗೊಳಿಸಿದೆ.

ಅಕ್ಕ ಪಡೆ ತಂಡವು ರಾಜ್ಯಾದ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಬೆಳಗ್ಗೆ 8 ರಿಂದ ರಾತ್ರಿ 8 ರವರೆಗೆ ವಾಹನದಲ್ಲಿ ಶಾಲೆ, ಕಾಲೇಜು, ಮಹಿಳಾ ವಸತಿನಿಲಯಗಳು, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸ್ಥಳೀಯ ಮಾರುಕಟ್ಟೆ, ಉದ್ಯಾನ ಸೇರಿದಂತೆ ಮೊದಲಾದ ಸೂಕ್ಷ್ಮ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿನ ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಅಗತ್ಯ ಕ್ರಮವಹಿಸಲಾಗುತ್ತಿದೆ.

**2.ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮ**: ಈ ಯೋಜನೆಯಡಿ ರಾಜ್ಯದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿರುವ 6 ತಿಂಗಳಿಂದ 6 ವರ್ಷದ ಮಕ್ಕಳು, ಗರ್ಭಿಣಿ / ಬಾಣಂತಿಯರು ಮತ್ತು ಮಹ್ವಾಕಾಂಕ್ಷಿ ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಎಲ್ಲಾ 14 ರಿಂದ 18 ವರ್ಷದ ಪ್ರಾಯಪೂರ್ವ ಬಾಲಕಿಯರಿಗೆ ಪೂರಕ ಪೌಷ್ಟಿಕ ಆಹಾರವನ್ನು ಒದಗಿಸಲಾಗುತ್ತಿದೆ.

**3.ಮಾತೃಪೂರ್ಣ ಯೋಜನೆ:** ಈ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟದೊಂದಿಗೆ ಹಾಲು ಮತ್ತು ಮೊಟ್ಟೆಯನ್ನು ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 600 ಕ್ಯಾಲೋರಿ, 18-20 ಗ್ರಾಂ ಪ್ರೋಟೀನ್ ಒಳಗೊಂಡ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.21/-ರ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.

ಈ ಯೋಜನೆಯಡಿ ಫಲಾನುಭವಿಗಳಿಗೆ ಆದ್ಯತೆ ಮೇರೆಗೆ ಸಾಮಾಜಿಕ / ಆರ್ಥಿಕ, ಆರೋಗ್ಯ ಹಾಗೂ ಇತರೆ ಕಾರಣಗಳಿಂದ ಕಚ್ಚಾ ಆಹಾರ ಸಾಮಗ್ರಿಗಳನ್ನು ಮನೆಗೆ (THR) ಪಡೆಯಲು ಅಥವಾ ಅಂಗನವಾಡಿ ಕೇಂದ್ರದಲ್ಲಿಯೇ ಪೌಷ್ಟಿಕಯುಕ್ತ ಬಿಸಿಯೂಟವನ್ನು ಸ್ವೀಕರಿಸಲು ಆಯ್ಕೆಗೆ ಅವಕಾಶ ಕಲ್ಪಿಸಲಾಗಿದೆ.

- ರಾಜ್ಯ ಪ್ರಾಯೋಜಿತ ಸೃಷ್ಟಿ ಯೋಜನೆಯಡಿ ಮೊಟ್ಟೆ ಹಾಗೂ ಕ್ಷೀರಭಾಗ್ಯ ಯೋಜನೆಯಡಿ ಮಕ್ಕಳಿಗೆ ವಾರದಲ್ಲಿ 5 ದಿನ 150 ಮಿ.ಲೀ ಹಾಲು ನೀಡಲಾಗುತ್ತಿದ್ದು, ಇದರಿಂದ ಅಪೌಷ್ಟಿಕತೆ ಕಡಿಮೆಯಾಗಿ ತಾಯಿ-ಮಗುವಿನ ಆರೋಗ್ಯದಲ್ಲಿ ಸುಧಾರಣೆಗೆ ಸಹಕಾರಿಯಾಗಿದೆ.**ಒಟ್ಟಾರೆ**, ಈ ಯೋಜನೆಗಳ ಮೂಲಕ ತಾಯಿ ಹಾಗೂ ಮಕ್ಕಳ **ಆರೋಗ್ಯದಲ್ಲಿ ಮಹತ್ವದ ಸುಧಾರಣೆಗೆ ಸಹಕಾರಿಯಾಗಿದೆ.**

**4.ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳು:** ಪೂರ್ವ ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಕನ್ನಡ ಹಾಗೂ ಇಂಗ್ಲೀಷ್ ಮಾಧ್ಯಮದಲ್ಲಿ ಉತ್ತಮ ಶಿಕ್ಷಣದ ಗುರಿಯೊಂದಿಗೆ 2025-26 ನೇ ಸಾಲಿನಲ್ಲಿ ಮೊದಲ ಹಂತದಲ್ಲಿ 5000 ಅಂಗನವಾಡಿ ಕೇಂದ್ರಗಳಲ್ಲಿ 04-06 ವರ್ಷದ ಮಕ್ಕಳಿಗೆ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿರುತ್ತದೆ. ಅಂಗನವಾಡಿ ಕಾರ್ಯಕರ್ತೆಯ ರಲ್ಲಿ PUC ಮತ್ತು ಪದವಿ/ ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವ ಹಾಗೂ ಈಗಾಗಲೇ ಅಗತ್ಯ ತರಬೇತಿ ಪಡೆದಿರುವ ಅಂಗನವಾಡಿ ಕಾರ್ಯಕರ್ತೆಯರನ್ನು ಬೋಧನೆ ಮಾಡಲು ಗುರುತಿಸಲಾಗಿದೆ.

**<u>5.ಚಿಗುರು ಕಾರ್ಯಕ್ರಮ</u>**: ಅಂಗನವಾಡಿ ಮಕ್ಕಳಲ್ಲಿ ಕಂಡುಬರುವ ಅಪೌಷ್ಟಿಕತೆಯನ್ನು ನಿವಾರಿಸಲು ಸಮುದಾಯ ಆಧಾರಿತ ತೀವ್ರ ಅಪೌಷ್ಟಿಕ ಮಕ್ಕಳ ನಿರ್ವಹಣೆ ಕಾರ್ಯಕ್ರಮ "ಚಿಗುರು" ಎಂಬ ವಿನೂತನ ಯೋಜನೆಯನ್ನು ಪ್ರಸ್ತುತ ಬಳ್ಳಾರಿ, ಬೀದರ, ಕಲಬುರಗಿ, ಯಾದಗಿರಿ, ಬೆಳಗಾವಿ, ರಾಯಚೂರು, ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಸದರಿ ಯೋಜನೆಯು ಆರಂಭಿಕ ಹಂತಗಳಲ್ಲಿ ತೀವ್ರ ಅಪೌಷ್ಟಿಕತೆಯನ್ನು ಗುರುತಿಸಿ, ವೈದ್ಯಕೀಯ ಸಮಸ್ಯೆಗಳಿಲ್ಲದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವೈದ್ಯಕೀಯ ಪೋಷಕಾಂಶಗಳು ಹಾಗೂ ಹೆಚ್ಚು ಪೋಷಕಾಂಶಯುಕ್ತ ಪೌಷ್ಟಿಕ ಆಹಾರವನ್ನು ನೀಡುವುದರೊಂದಿಗೆ, ಮಕ್ಕಳ ಪೋಷಣೆಯು ತಾಯಿಯ ಜವಾಬ್ದಾರಿ ಮಾತ್ರವಲ್ಲದೇ ಇಡೀ ಕುಟುಂಬದ ಜವಾಬ್ದಾರಿ ಎಂಬ ಪರಿಕಲ್ಪನೆಯಡಿ ರೂಪಿಸಲಾಗಿರುತ್ತದೆ.

## ಅನುಬಂಧ-3

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1121 (1242)

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

### ಕೇಂದ್ರ ಸರ್ಕಾರದ ಯೋಜನೆಗಳು

1) **ಒನ್ ಸ್ಟಾಪ್ ಸೆಂಟರ್ (ಸಖಿ):** - ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ವೈದ್ಯಕೀಯ ಚಿಕಿತ್ಸೆ ಮತ್ತು ನೆರವು, ಪೋಲೀಸ್ ನೆರವು, ಕಾನೂನು ನೆರವು ಹಾಗೂ ಸಮಾಲೋಚನೆ ಸಮಗ್ರ ಸೇವೆಗಳನ್ನು ಒಂದೇ ಸೂರಿನಡಿ ನೀಡಲಾಗುತ್ತಿದೆ. ರಾಜ್ಯದ 31 ಜಿಲ್ಲೆಗಳಲ್ಲಿ ಒಟ್ಟು 40 ಒನ್ ಸ್ಟಾಪ್ ಸೆಂಟರ್ ಕಾರ್ಯನಿರ್ವಹಿಸುತ್ತಿವೆ.

2) **ಮಹಿಳಾ ಸಹಾಯವಾಣಿ – 181**: ಮಹಿಳೆಯರಿಗೆ ಮಾಹಿತಿಯನ್ನು ನೀಡಲು, ದೌರ್ಜನ್ಯ ಮತ್ತು ಸಂಕಷ್ಟದಲ್ಲಿರುವ ಮಹಿಳೆಯರಿಗೆ ತುರ್ತು ನೆರವನ್ನು ಒದಗಿಸುವ ನಿಟ್ಟಿನಲ್ಲಿ ಮಹಿಳಾ ಸಹಾಯವಾಣಿ-181 ಎಂಬ ಉಚಿತ ದೂರವಾಣಿ ಸೇವೆಯನ್ನು ಕಾರ್ಯಗತಗೊಳಿಸಿ ತುರ್ತು ಪ್ರತಿಕ್ರಿಯೆ ಬೆಂಬಲ ವ್ಯವಸ್ಥೆ (ERSS)-112 ರೊಂದಿಗೆ ಸಂಯೋಜಿಸಲು WCD Control Room ನ್ನು C-DAC ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸೇವೆಯನ್ನು ದಿನದ 24X7 ಗಂಟೆಗಳು ರಾಜ್ಯಾದ್ಯಂತ ಒದಗಿಸಲಾಗುತ್ತಿದೆ.

3) **ಶಕ್ತಿ ಸದನ:** ಸ್ವಾಧಾರ ಗೃಹ ಯೋಜನೆಯ ಮುಖ್ಯ ಉದ್ದೇಶ ಕಷ್ಟಕರ ಪರಿಸ್ಥಿತಿಯಲ್ಲಿರುವ ಮಹಿಳೆಯರಿಗೆ ಆಶ್ರಯ, ತರಬೇತಿ ಹಾಗೂ ಶಿಕ್ಷಣ ನೀಡುವುದರ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ಸಶಕ್ತರನ್ನಾಗಿ ಮಾಡುವುದಾಗಿರುತ್ತದೆ. ಉಜ್ವಲ ಯೋಜನೆಯು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆ ಮತ್ತು ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು ಮತ್ತು ಪುನರ್ವಸತಿ ಕಲ್ಪಿಸಲು ಹಾಗೂ ಇವರುಗಳ ಕುಟುಂಬದವರೊಂದಿಗೆ ಪುನರ್‌ವಿಲೀನಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ.

4) **ಮಹಿಳಾ ಸಬಲೀಕರಣ ಘಟಕ:** ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಆಂತರಿಕ ಸಮನ್ವಯತೆಯಲ್ಲಿ ಇಲಾಖೆಗಳೊಂದಿಗೆ ಕಾರ್ಯನಿರ್ವಹಿಸುವುದು. ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳುವ ವಾತಾವರಣವನ್ನು ಸೃಜಿಸಿ ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶದೊಂದಿಗೆ ರಾಜ್ಯ ಮಟ್ಟದಲ್ಲಿ ಒಂದು ರಾಜ್ಯ ಮಹಿಳಾ ಸಬಲೀಕರಣ ಘಟಕವನ್ನು ಮತ್ತು ಜಿಲ್ಲಾ ಮಟ್ಟದಲ್ಲಿ 31 ಜಿಲ್ಲಾ ಮಹಿಳಾ ಸಬಲೀಕರಣ ಘಟಕಗಳನ್ನು (ಜಿಲ್ಲೆಗೆ 1 ರಂತೆ) ಸ್ಥಾಪಿಸಲಾಗಿದೆ.

### ರಾಜ್ಯ ವಲಯ ಕಾರ್ಯಕ್ರಮಗಳು

1) **ಸಾಂತ್ವನ:** ವಿವಿಧ ರೀತಿಯ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಸಮಾಲೋಚನೆ ಮತ್ತು ಅಗತ್ಯ ನೆರವನ್ನು ದಿನದ 24X7 ಗಂಟೆಗಳು ನೆರವನ್ನು ಒದಗಿಸುತ್ತದೆ. ಸಮಾಜದಲ್ಲಿ ವರದಕ್ಷಿಣೆ ಕಿರುಕುಳ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಕಾನೂನು ನೆರವು, ತಾತ್ಕಾಲಿಕ ಆಶ್ರಯವನ್ನು ಒದಗಿಸಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರನ್ನಾಗಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ರಾಜ್ಯದಲ್ಲಿ 177 ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

2) **ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ 2005 ನಿಯಮ 2006 :** ರಾಜ್ಯವು 2006 ರಿಂದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯನ್ನು ಅನುಷ್ಠಾನಗೊಳಿಸುತ್ತಿದ್ದು ಇದು ಮುಖ್ಯವಾಗಿ ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಉದ್ದೇಶದಿಂದ, ಲಿಂಗ ಸಮಾನತೆಯನ್ನು ಸಾಧಿಸುವಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಕಾಯ್ದೆಯ ಅನುಷ್ಠಾನದಲ್ಲಿ ಸಹಕರಿಸಲು ರಾಜ್ಯಾದ್ಯಂತ 116 ಸ್ವಯಂ ಸೇವಾ ಸಂಸ್ಥೆಗಳನ್ನು ಸೇವಾ ಸಂಸ್ಥೆಗಳೆಂದು ಗುರುತಿಸಲಾಗಿದೆ. ಇದರೊಂದಿಗೆ ಕೌಟುಂಬಿಕ ಹಿಂಸೆಗೊಳಗಾದ ಮಹಿಳೆಯರಿಗೆ ಆಶ್ರಯ ಹಾಗೂ ಸಮಾಲೋಚನೆಯನ್ನು ಕಲ್ಪಿಸಲು 40 ಶಕ್ತಿ ಸದನ ಕೇಂದ್ರಗಳು ಹಾಗೂ 177 ಸಾಂತ್ವನ ಕೇಂದ್ರಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನೊಂದ ಮಹಿಳೆಯರಿಗೆ ಉಚಿತ ಕಾನೂನು ನೆರವನ್ನು ಒದಗಿಸಲಾಗುತ್ತಿದೆ.

**3) ಉದ್ಯೋಗಸ್ಥ ಮಹಿಳಾ ವಸತಿ ನಿಲಯ ಯೋಜನೆ:** ಉದ್ಯೋಗಸ್ಥ ಮಹಿಳೆಯರ ರಕ್ಷಣೆ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ 2022-23ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯ ಕಂಡಿಕೆ 148 ರಂತೆ, ಮಹಿಳಾ ಮತ್ತು ಮಕ್ಕಳ ಇಲಾಖೆಯ ವತಿಯಿಂದ ಬೆಂಗಳೂರು, ಮೈಸೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಮಂಗಳೂರು, ದಕ್ಷಿಣ ಕನ್ನಡ ಹಾಗೂ ಕಲಬುರಗಿ ಜಿಲ್ಲೆಗಳಲ್ಲಿ 23 ಉದ್ಯೋಗಸ್ಥ ಮಹಿಳೆಯರಿಗೆ ವಸತಿನಿಲಯಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಪ್ರಾರಂಭಿಸಲಾಗಿದೆ. ಗಾರ್ಮೆಂಟ್ಸ್, ಕೈಗಾರಿಕೆಗಳು ಮತ್ತು ಇತರ ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ದುಡಿಯುವ ಮಹಿಳೆಯರಿಗೆ ಆದ್ಯತೆ ಮೇರೆಗೆ ಸೌಲಭ್ಯ ನೀಡಲಾಗುತ್ತಿದೆ.

## ಮಕ್ಕಳ ರಕ್ಷಣಾ ನಿರ್ದೇಶನಾಲಯ

1. ಬಾಲ್ಯವಿವಾಹದ ಪ್ರಯತ್ನ, ನಿಶ್ಚಿತಾರ್ಥದ ಬಗ್ಗೆ ಕ್ರಮ ಕೈಗೊಳ್ಳಲು ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ರಲ್ಲಿ ಯಾವುದೇ ಕಲಂಗಳಲ್ಲಿ ಅವಕಾಶವಿರುವುದಿಲ್ಲ. ಆದ್ದರಿಂದ, ದೂರನ್ನು ದಾಖಲಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಇದನ್ನು ಅಪರಾಧವನ್ನಾಗಿಸಲು ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ -2025) ಅನ್ನು ಜಾರಿಗೆ ತರಲು ಕ್ರಮವಹಿಸಲಾಗುತ್ತಿದೆ.

2. ರಾಜ್ಯದಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿಯರು ಬಾಲ ಗರ್ಭಿಣಿಯರು ಆಗುವುದನ್ನು ತಡೆಗಟ್ಟಲು ಎಲ್ಲಾ ಭಾಗೀದಾರ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಹಂತಗಳಲ್ಲಿ ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡಲು ಯೋಜಿಸಲಾಗುತ್ತಿದೆ.

3. ಮಕ್ಕಳ ಸಹಾಯವಾಣಿ-1098 (24*7) ಕಾರ್ಯನಿರ್ವಹಿಸುತ್ತಿದೆ. ಸಂಕಷ್ಟದಲ್ಲಿರುವ ಮಗುವಿನ ಬಗ್ಗೆ ಯಾವುದೇ ಸಮಯದಲ್ಲಿ ಕರೆ ಸ್ವೀಕೃತವಾದರೂ ತಕ್ಷಣ ಮಗುವನ್ನು ರಕ್ಷಿಸಲು ಸಂಬಂಧಿಸಿದ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಿರುತ್ತಾರೆ.

4. ದಿನಾಂಕ: 06.09.2024 ರ ಸರ್ಕಾರದ ಆದೇಶದಂತೆ ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳು ಬಾಲಗರ್ಭಿಣಿಯರಾಗುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ವಿವಿಧ ಇಲಾಖೆಗಳಿಗೆ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ.

5. ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳ ಕಾವಲು ಸಮಿತಿಯನ್ನು ರಚಿಸಲಾಗಿದೆ.

6. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ರಚಿಸಲಾಗಿದ್ದು, ಈ ಪ್ರಕರಣಗಳ ಕುರಿತು ಪ್ರತಿ ತ್ರೈಮಾಸಿಕದಲ್ಲಿ ಪರಿಶೀಲನೆ ಮಾಡಲಾಗುತ್ತಿದೆ.

7. ಪಾಲನೆ/ ಪೋಷಣೆ ಅವಶ್ಯಕತೆ ಇರುವ ಮಕ್ಕಳ ಸುರಕ್ಷತೆ ಮತ್ತು ಪುನರ್ವಸತಿಗಾಗಿ ಪ್ರತಿ ಜಿಲ್ಲೆಯಲ್ಲೂ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ವಿಶೇಷ ಪೊಲೀಸ್ ಘಟಕ, ಮಕ್ಕಳ ಪಾಲನಾ ಸಂಸ್ಥೆ ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

8. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ (NCPCR) ವತಿಯಿಂದ ಕ್ರಮಬದ್ಧ ಕಾರ್ಯವಿಧಾನ(SOP) ರಚನೆಯಾಗಿದ್ದು, ಭಾಗೀದಾರ ಇಲಾಖೆಗಳಿಗೆ ಸದರಿ ಕಾರ್ಯವಿಧಾನದಂತೆ ಕಾರ್ಯನಿರ್ವಹಿಸಲು ಈಗಾಗಲೇ ತಿಳಿಸಲಾಗಿದೆ.

9. ಸಂತ್ರಸ್ಥೆಗೆ ಆರೋಗ್ಯ ಸೇವೆ ಮತ್ತು ವೈದ್ಯಕೀಯ ತಪಾಸಣೆಗೆ ಒಂದು ಬಾರಿಗೆ ರೂ.6000/-ಹಾಗೂ ಶಿಕ್ಷಣ ಮುಂದುವರೆಸಲು ಇಚ್ಛಿಸಿದಲ್ಲಿ ಪ್ರಾಯೋಜಕತ್ವ ಯೋಜನೆಯಡಿ ಪ್ರತಿ ತಿಂಗಳಿಗೆ ರೂ.4,000/-ಗಳಂತೆ 18 ವರ್ಷ ಪೂರ್ಣಗೊಳ್ಳುವವರೆಗೂ ಆರ್ಥಿಕ ಸೌಲಭ್ಯ ಒದಗಿಸಲಾಗುವುದು.

10. Pradhan Mantri Jan ArogyaYojana (PM-JAY) ಅಡಿಯಲ್ಲಿವರ್ಷಕ್ಕೆ ರೂ.5.00 ಲಕ್ಷಗಳ ಆರೋಗ್ಯ ವಿಮೆಯನ್ನು ಸಂತ್ರಸ್ಥೆಗೆ ಮತ್ತು ಅವಳ ನವಜಾತ ಶಿಶುವಿಗೆ ನೀಡಲಾಗುವುದು.

11. ಬಾಲ್ಯವಿವಾಹ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲಿ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಆಯಾ ತಾಲ್ಲೂಕು ತಹಶೀಲ್ದಾರ್‌ರನ್ನು ಸಮನ್ವಯ ಹಾಗೂ ಪರಿಶೀಲನಾ ಸಮಿತಿ ಅಧ್ಯಕ್ಷರನ್ನಾಗಿ ಸರ್ಕಾರವು ನೇಮಿಸಿದೆ.

12. ಬಾಲಗರ್ಭಿಣಿ ಪ್ರಕರಣಗಳು ಕಂಡುಬಂದಲ್ಲಿ ನಿಯಮಾನುಸಾರ FIR ದಾಖಲಿಸಿ ಕ್ರಮವಹಿಸಲಾಗುತ್ತಿದೆ.

13. ಮಕ್ಕಳ ರಕ್ಷಣಾ ನೀತಿ -2023 ಕುರಿತು ಎಲ್ಲಾ ಶಾಲಾ ಕಾಲೇಜುಗಳಲ್ಲಿ ಅರಿವು ಮೂಡಿಸಲಾಗಿದೆ. ಮಕ್ಕಳ ರಕ್ಷಣಾ ಸಮಿತಿಗಳನ್ನು ಪ್ರತಿ ಶಾಲೆಗಳಲ್ಲಿಯೂ ರಚಿಸಲು ಕ್ರಮವಹಿಸಲಾಗಿದೆ.

14. ಮಕ್ಕಳ ಪಾಲನಾ ಕೇಂದ್ರಗಳಲ್ಲಿ ದಾಖಲಾಗುವ ಬಾಲಗರ್ಭಿಣಿ/ಬಾಲತಾಯಿ ಮತ್ತು ನವಜಾತ ಶಿಶುವಿಗೆ ಸಂಬಂಧಿಸಿದಂತೆ ಪಾಲಿಸಬೇಕಾದ ಕ್ರಮಬದ್ಧ ಕಾರ್ಯವಿಧಾನ (SOP) ವನ್ನು ದಿ:02.09.2025 ರಂದು ಹೊರಡಿಸಲಾಗಿದೆ.

15. ರಾಜ್ಯದ ಎಲ್ಲಾ ಶಾಲಾ ಕಾಲೇಜು ವಸತಿ ನಿಲಯ ಹಾಗೂ ತರಬೇತಿ ಸಂಸ್ಥೆಗಳಲ್ಲಿ ಮಕ್ಕಳ ಹಕ್ಕುಗಳು ಬಾಲಗರ್ಭಿಣಿ ಪೋಕ್ಸೋ, ಬಾಲ್ಯವಿವಾಹ ಹಾಗೂ ಮಕ್ಕಳ ಸಹಾಯವಾಣಿ-1098 ಮಕ್ಕಳಿಗೆ ಅರಿವು ಜಾಗೃತಿ ಮೂಡಿಸುವ ಕುರಿತು ವಿವಿಧ ಇಲಾಖೆಗಳು ನಿಗಾವಹಿಸಬೇಕಾದ ಆದ್ಯತೆಯ ಅಂಶಗಳ ಕುರಿತು 07 ಇಲಾಖೆಗಳಿಂದ ದಿನಾಂಕ:13.10.2025 ರಂದು ಜಂಟಿ ಸುತ್ತೋಲೆಯನ್ನು ಹೊರಡಿಸಲಾಗಿದೆ.

**ಪ್ರಕರಣಗಳನ್ನು ನಿಯಂತ್ರಿಸಲು ಈ ಕೆಳಕಂಡಂತೆ ಕಾಯ್ದೆ ಮತ್ತು ನಿಯಮಗಳನ್ನು ರೂಪಿಸಲಾಗಿದೆ.**

- ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015
- ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ತಿದ್ದುಪಡಿ ಕಾಯ್ದೆ 2021, 2016ರ ಮಾದರಿ ನಿಯಮಗಳು.
- ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೋ) ಕಾಯ್ದೆ-2012 ನಿಯಮಗಳು-2020.
- ಬಾಲ್ಯವಿವಾಹ ನಿಷೇಧ ಕಾಯ್ದೆ-2006,
- ಬಾಲ್ಯವಿವಾಹ ನಿಷೇಧ (ಕರ್ನಾಟಕ) ನಿಯಮಗಳು- 2014.
- ಬಾಲ್ಯವಿವಾಹ ನಿಷೇಧ (ಕರ್ನಾಟಕ ತಿದ್ದುಪಡಿ) ಕಾಯ್ದೆ-2016
- ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ-1986

ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ (ತಡೆಗಟ್ಟುವಿಕೆ) ಕಾಯ್ದೆ-1956.

**ಒಳಾಡಳಿತ ಇಲಾಖೆ**

1. ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ Free and Fair registration of cases ಎಂಬುದು ನಮ್ಮ ರಾಜ್ಯದ ಪೊಲೀಸ್ ಇಲಾಖೆಯ ಘೋಷವಾಕ್ಯವಾಗಿದೆ.
2. ಮಕ್ಕಳು ಕಾಣೆಯಾದ ಸಂದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ಆದೇಶದಂತೆ ನಾಪತ್ತೆ ಪ್ರಕರಣಗಳನ್ನು ದಾಖಲಿಸಿದ ನಂತರ ತನಿಖಾಧಿಕಾರಿಗಳು ಪತ್ತೆಹಚ್ಚಲು ಕೈಗೊಳ್ಳಬೇಕಾದ / ಅನುಸರಿಸಬೇಕಾದ ಕ್ರಮಗಳ ಕುರಿತು ಪೊಲೀಸ್ ಪ್ರಧಾನ ಕಛೇರಿಯ ಸ್ಥಾಯಿ ಆದೇಶ ಸಂಖ್ಯೆ: 1054 ದಿನಾಂಕ: 21.01.2026 ರಂದು ನಿರ್ದೇಶನ ನೀಡಲಾಗಿದೆ.
3. ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದಡಿ ಹಳ್ಳಿಗಳಲ್ಲಿ ಸಮೂಹ ಸದಸ್ಯರಿಗೆ ಜಾಗೃತಿ ಮೂಡಿಸಲಾಗಿರುತ್ತದೆ.
4. ಮಹಿಳಾ ಮತ್ತು ಮಕ್ಕಳ ಸುರಕ್ಷತೆ ಮತ್ತು ಸಂರಕ್ಷಣೆಗಾಗಿ ರಾಜ್ಯದ ಎಲ್ಲಾ ಜಿಲ್ಲೆ ಮತ್ತು ನಗರ ಪ್ರದೇಶಗಳಲ್ಲಿ (ಬೆಂಗಳೂರು ನಗರ ಹೊರೆತುಪಡಿಸಿ) "ಅಕ್ಕ ಪಡೆ"ಯನ್ನು ರಚಿಸಲಾಗಿದೆ.
5. ಏಕಾಂಗಿಯಾಗಿ ವಾಸಿಸುವ ಹಿರಿಯ ನಾಗರೀಕರಿಗೆ ಸುರಕ್ಷೆ ಮತ್ತು ವಿಶ್ವಾಸ ನೀಡುವ ಆಶಾಕಿರಣವಾಗಿ "ಆಸರೆ" ಎಂಬ ಸಮುದಾಯ ಪೊಲೀಸ್ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗಿದೆ.
6. ಮಹಿಳಾ ಸಹಾಯವಾಣಿ (1091) ಮಕ್ಕಳ ಸಹಾಯವಾಣಿ (1098) ಮತ್ತು 22943225 ಗಳು ಮತ್ತು ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿವೆ.
7. ಮಹಿಳಾ ಮತ್ತು ಮಕ್ಕಳ ಸುರಕ್ಷತ ಸಂಬಂಧವಾಗಿ 112-ERSS ಕಾರ್ಯ ನಿರ್ವಹಿಸುತ್ತಿದ್ದು ತ್ವರಿತ ನೆರವು ನೀಡಿ ಕರೆಗಳಿಗೆ ಸ್ಪಂದಿಸಲಾಗುತ್ತಿದೆ.

8. ಬೆಂಗಳೂರು ನಗರದಲ್ಲಿ Safe City Project ಯೋಜನೆ ಅಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಸುರಕ್ಷತ ಸಂಬಂಧವಾಗಿ 8876 ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಲಾಗಿದೆ.

9. ಜನಸಂದಣಿ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಗಾಗಿ 50 ಸೇಫ್ಟಿ ಐಲ್ಯಾಂಡ್ (Safety Island) ಗಳನ್ನು ಗುರುತಿಸಿ ಮಹಿಳೆಯರಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ.

10. ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೊಲೀದಗ ಠಾಣೆಗಳಲ್ಲಿ 1050 Women Help Desk ಗಳನ್ನು ಸೃಜಿಸಿ 24/7 ಮಹಿಳಾ ಸುರಕ್ಷತಾ ದೃಷ್ಟಿಯಿಂದ ಕರ್ತವ್ಯ ನಿರ್ವಹಿಸಲಾಗುತ್ತಿದೆ.

11. ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 43 ಮಹಿಳಾ ಪೊಲೀಸ ಠಾಣೆಗಳು, ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕಗಳಾಗಿಯೂ ಸಹ (Anti-Human Trafficking Units) ಕಾರ್ಯ ನಿರ್ವಹಿಸಲಾಗುತ್ತಿದೆ. 01 ವಿಶೇಶ ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕವು ಸಿಐಡಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ.

12. ಕೇಂದ್ರ ಸರ್ಕಾರದ ಗೃಹ ಸಚಿವಾಲಯ ಸಹಯೋಗದೊಂದಿಗೆ CCPWC (Cyber Crime Prevention Against Women and Children) ಪೋರ್ಟಲ್ ಅಡಿಯಲ್ಲಿ ಆನ್-ಲೈನ್ ನಲ್ಲಿ ದಾಖಲಾಗುವ ದೂರುಗಳನ್ನು ಸೆನ್ ಪೊಲೀಸ್ ಠಾಣೆಗಳಲ್ಲಿ ದಾಖಲಿಸಿ ಕ್ರಮವಹಿಸಲಾಗುತ್ತದೆ.

13. ಅಪರಾಧಗಳನ್ನು ತಡೆಗಟ್ಟಲು ಹಾಗೂ ಅಪರಾಧಗಳ ಕುರಿತು ಎಫ್.ಎಂ. ಸಾಮಾಜಿಕ ಜಾಲತಾಣ, ಟಿವಿ & ಪತ್ರಿಕೆ ಮಾದ್ಯಗಳ ಮೂಲಕ ಜನ ಜಾಗೃತಿ ಮೂಡಿಸಲಾಗುತ್ತಿದೆ.

14. ಕಾಣೆಯಾದ ಮಕ್ಕಳ ಮಾಹಿತಿ ಮತ್ತು ಪತ್ತೆಯಾದ ಮಕ್ಕಳ ಮಾಹಿತಿಯನ್ನು Mission Vathsalya Portal ಗಳಿಗೆ ಸಲ್ಲಿಸಿಕೊಂಡು ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

15. ಪ್ರತಿ ಗುರುವಾರ ತೆರೆದ ಮನೆ ಕಾರ್ಯಕ್ರಮಗಳನ್ನು ಮಕ್ಕಳ ಕಾನೂನಿನ ಬಗ್ಗೆ ಮಕ್ಕಳಿಗೆ ಅರಿವು/ ಜಾಗೃತಿ ಮೂಡಿಸುತ್ತಿರುವುದು.

16. ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು/ ನಿಯಂತ್ರಿಸಲು ಆರೋಪಿತರನ್ನು ಕಠಿಣವಾಗಿ ಶಿಕ್ಷಿಸಲು ಪೋಕ್ಸೊ, ಬಾಲ್ಯ ವಿವಾಹ, ಬಾಲ ಕಾರ್ಮಿಕ, ಜೀತ ಪದ್ಧತಿ, ಜೆ.ಜೆ.ಕಾಯ್ದೆ ಮತ್ತು ಬಿಎಐನ್ ಎಸ್‌ಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗುತ್ತಿದೆ.

17. ನ್ಯೂ ಕ್ರಿಮಿನಲ್ ಲಾ ಅಡಿಯಲ್ಲಿ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನ 60 ದಿನಗಳೊಳಗೆ ಪೂರ್ಣಗೊಳಿಸಿ, ಆರೋಪಿಗಳ ವಿರುದ್ಧ ದೋಷಾರೋಪಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲು ಕಾನೂನಿಗೆ ತಿದ್ದುಪಡಿ ತರಲಾಗಿರುತ್ತದೆ.

18. ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಬಾಲ್ಯ ವಿವಾಹ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಲಾಗಿರುತ್ತದೆ.

19. ಸಂತ್ರಸ್ತರ ದೂರು / ಅವಹಾಲುಗಳು, ಹೇಳಿಕೆಗಳು, ಜೀವ ಬೆದರಿಕೆ ಇದ್ದರೆ ಅಗತ್ಯ ರಕ್ಷಣೆಗಾಗಿ ಹಾಗೂ ಪರಿಶೀಲನೆಗಾಗಿ ಮುಂತಾದ ಇತರೆ ಸಮಸ್ಯೆಗಳನ್ನು ಆಲಿಸಲು ಪ್ರತಿ ತಿಂಗಳ 3ನೇ ಭಾನುವಾರವನ್ನು ಸಂತ್ರಸ್ತರ / ದೂರುದಾರರ (Victim Day) ನೊಂದವರ ದಿನವೆಂಬ ಕಾರ್ಯಕ್ರಮವನ್ನು ಠಾಣಾವ್ಯಾಪ್ತಿಯಲ್ಲಿ ಆಯೋಜಿಸಲಾಗುತ್ತಿದೆ.

20. ಅಪರಾಧ ತಡೆಮಾಸ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮುಂತಾದ ಕಾರ್ಯಕ್ರಮಗಳ ಮೂಲಕ ಅಪರಾಧಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಮಹಿಳೆಯ ಸುರಕ್ಷತೆಗಾಗಿ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ KSP ವೆಬ್ಸೈಟ್ ನಲ್ಲಿ ಈ ಕೆಳಕಂಡ ಸೇವೆಗಳನ್ನು ಒದಗಿಸಲಾಗುತ್ತದೆ:

- ಮಹಿಳೆಯರ ಸುರಕ್ಷತೆಗೆ ವಿಶೇಷವಾಗಿ ವಿನ್ಯಾಸಗೊಳಿಸಿದ ಆಪ್.
- SOS ಒತ್ತಿದತಕ್ಷಣ Control Room ಗೆಸೂಚನೆ + ಸ್ಥಳವಿವರ + Audio/Video evidence ಕಳಿಸಲಾಗುತ್ತದೆ.
- Live Location Track ERSS Command Centre ಮೂಲಕ ತ್ವರಿತ ಪ್ರತಿಕ್ರಿಯೆ
- Women safety awareness & self-defense programs.